ದಿನಾಂಕಃ 20-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- 2 ನೇ ಎದುರುದಾರ ಪರ ಶ್ರೀ ವಿ ಎಸ ಎ ವಕೀಲರಿಂದ

ಅಪಘಾತ ಆದಾಗ ನನ್ನ ವಯಸ್ಸು ಸುಮಾರು 67-68 ವರ್ಷ ಇತ್ತು ಎಂದರೆ 48 ವರ್ಷ ಇತ್ತು. ನನ್ನ ಉದ್ಯೋಗ ವ್ಯವಸಾಯ ಎಂದು ಅರ್ಜಿಯಲ್ಲಿ ಬರೆಸಿದ್ದು ನನ್ನ ಹೆಸರಿನಲ್ಲಿ 1 ವರೆ ಎಕರೆ ಬಯಲು ಜಮೀನು ಇದೆ. ಅದರ ರಿ ಸ ಸಂಖ್ಯೆ 82/2 ಎಂದರೆ ಸರಿ. ಇವತ್ತಿಗೂ ಆ ಜಮೀನಿಂದ ಆದಾಯ ಬರುತ್ತಿದೆ ಎಂದರೆ ಸರಿಯಲ್ಲ . ಈಗ ಸದರಿ ಜಮೀನು ಬೀಳು ಬಿದ್ದಿದೆ. ನಿಪಿ 22 ನನ್ನ ಜಮೀನಿನ 2023-24 ನೇ ಸಾಲಿನ ಪಹಣಿ ಪತ್ರಿಕೆ ಆಗಿದ್ದು ಅದರಲ್ಲಿ ಗೋವಿನ ಜೋಳ ಅಧಿಕ ಇಳುವರಿ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಜಮೀನು ಬೀಳು ಬಿದ್ದಿದೆ ಆದ್ದರಿಂದ ಯಾವುದೇ ಆದಾಯ ಬರುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೆ ಆ ಜಮೀನಿನಲ್ಲಿ ನಾನು ಬೆಳೆ ಬೆಳೆಯುತ್ತಿದ್ದು ಅದೇ ಆದಾಯದಿಂದ ಜೀವನ ಸಾಗಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ದಿನಾಂಕದಂದು ನಾನೇ ಮೋಟಾರಸೈಕಲ್ ಚಾಲನೆ ಮಾಡುತ್ತಿದ್ದೆ ಎಂದರೆ ಸರಿ. ಸದರಿ ಮೋಟಾರಸೈಕಲ್‌ನಲ್ಲಿ ನಾನು, ನನ್ನ ಹೆಂಡತಿ ಹಾಗೂ ನನ್ನ 5 ವರ್ಷದ ಮೊಮ್ಮಗ ಒಟ್ಟು ಮೂರು ಜನ ಪ್ರಯಾಣಿಸುತ್ತಿದ್ದೆವು ಎಂದರೆ ನನ್ನ ಮೊಮ್ಮಗ 4 ವರ್ಷದವನು ಇದ್ದನು. ಮೋಟಾರಸೈಕಲ್‌ನಲ್ಲಿ ನನ್ನ ಹೆಂಡತಿ ಮೊಮ್ಮಗನನ್ನು ಎತ್ತುಕೊಂಡು ಕುಳಿತಿದ್ದರು. ನನ್ನ ಮೊಮ್ಮಗ ನನ್ನ ಹೆಂಡತಿಯ ತೊಡೆಯ ಮೇಲೆ ಕುಳಿತಿದ್ದನು. ಮೋಟಾರಸೈಕಲ್ ಚಾಲನೆ ಮಾಡಲು ನನ್ನ ಹತ್ತಿರ ಚಾಲನಾ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ಚಾಲನಾ ಪರವಾನಿಗೆಯ ಪ್ರತಿ ಹಾಜರುಪಡಿಸಿಲ್ಲ

ಎಂದರೆ ಸರಿಯಲ್ಲ. ನನಗೆ ಮೋಟಾರಸೈಕಲ್ ಚಲಾಯಿಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ದಿನ ನಾನು ನನ್ನ ಚಾಲನಾ ಪರವಾನಿಗೆ ತಂದಿರುವುದಿಲ್ಲ.

ಬಜಾಜ ಪ್ಯಾಸೆಂಜರ್ ವಾಹನ ನನ್ನ ಎದುರುಗಡೆಯಿಂದ ಬಂದಿತ್ತು. ಎರಡೂ ವಾಹನಗಳ ನಡುವೆ ಮುಖಾಮುಖಿ ಅಪಘಾತ ಆಗಿತ್ತು ಎಂದರೆ ಸರಿ. ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿರುತ್ತದೆ ಎಂದರೆ ನಾನು ರಸ್ತೆಯ ಎಡಬದಿಯಲ್ಲಿ ಹೋಗುತ್ತಿರುವಾಗ ಎದುರುಗಡೆಯಿಂದ ಬಜಾಜ ಪ್ಯಾಸೆಂಜರ್ ವಾಹನ ಬಂದು ನನ್ನ ವಾಹನಕ್ಕೆ ಅಪಘಾತಪಡಿಸಿತ್ತು. ಆ ದಿನ ನಾನು ಇಬ್ಬರು ಹಿಂಬದಿ ಸವಾರರೊಂದಿಗೆ ಮೋಟಾರಸೈಕಲನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಎದುರುಗಡೆಯಿಂದ ಬಂದಂತಹ ಅಟೋ ರಿಕ್ಷಾಗೆ ಅಪಘಾತಪಡಿಸಿದ್ದೆ ಎಂದರೆ ಸರಿಯಲ್ಲ. ಅಪಘಾತ ಸಂಪೂರ್ಣ ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ಅಪಘಾತದ ಬಗ್ಗೆ ದೂರು ನನ್ನ ಹೆಂಡತಿ ಕೊಟ್ಟಿರುತ್ತಾರೆ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಸಹ ಆ ರೀತಿ ದೂರು ಕೊಟ್ಟರೆ ಪರಿಹಾರ ಬರುವುದಿಲ್ಲ ಎಂಬ ಉದ್ದೇಶದಿಂದ ನಾನು ಮತ್ತು ನನ್ನ ಹೆಂಡತಿ ಕೂಡಿಕೊಂಡು ಪರಿಹಾರ ಪಡೆಯುವ ಉದ್ದೇಶದಿಂದ ಅಟೋ ರಿಕ್ಷಾ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಅಟೋ ರಿಕ್ಷಾ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಬಲಗಾಲಿನ ಎರಡು ಮೂಳೆಗಳು ಮುರಿದಿವೆ. ಅಪಘಾತ ಆದ ತಕ್ಷಣ ನನ್ನನ್ನು

ಹಾವೇರಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ನಾನು ಸುಮಾರು 2 ತಾಸು ಇದ್ದೆ. ಆನಂತರ ಹೆಚ್ಚಿನ ಚಿಕಿತ್ಸೆಗೆ ನನ್ನನ್ನು ದಾವಣಗೆರೆಯ ಎಸ.ಎಸ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಸದರಿ ಆಸ್ಪತ್ರೆಯಲ್ಲಿ ನಾನು 2 ತಿಂಗಳು ಮೇಲ್ಪಟ್ಟು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಕ್ಷ-ಕಿರಣ ಮಾಡಲಿಲ್ಲ ಆದರೆ ದಾವಣಗೆರೆಯ ಎಸ.ಎಸ ಆಸ್ಪತ್ರೆಯಲ್ಲಿ ಮಾಡಿರುತ್ತಾರೆ. ದಾವಣಗೆರೆಯ ಎಸ.ಎಸ ಆಸ್ಪತ್ರೆಯಲ್ಲಿ ತೆಗೆದ ಕ್ಷ-ಕಿರಣ ಫೀಲಂನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಫೀಲಂ ಹಾಜರುಪಡಿಸದಿದ್ದರೂ ಸಹ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಣಗೆರೆ ಎಸ.ಎಸ ಆಸ್ಪತ್ರೆಯಲ್ಲಿ ತೆಗೆದಂತಹ ಕ್ಷ-ಕಿರಣದಲ್ಲಿ ಮೂಳೆಮುರಿತ ಕಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಆದಂತಹ ಗಾಯಗಳು ಸಾಮಾನ್ಯ ಸ್ವರುಪದ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ನನಗೆ ಯಾವುದೇ ಮೂಳೆಮುರಿತ ಆಗದಿರುವ ಕಾರಣ ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಕ್ಷ-ಕಿರಣ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಕೇಸಿಗೆ ಅನುಕೂಲ ಆಗಲೀ ಎಂದು ಹಾಗೂ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ದಾವಣಗೆರೆ ಎಸ.ಎಸ ಆಸ್ಪತ್ರೆಯ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೆನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ನತೆ ಉಂಟಾಗದಿದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಅಂಗನ್ಯೂನ್ನತೆ ಪ್ರಮಾಣಪತ್ರ ಸೃಷ್ಟಿ ಮಾಡಿ ಹಾಜರುಪಡಿಸಿದ್ದೆನೆ ಎಂದರೆ ಸರಿಯಲ್ಲ. ಅಟೋ ಚಾಲಕನ ತಪ್ಪಿ ನಿಂ ಅಪಘಾತ ಆಗದಿರುವ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

<u>ಪಾಟಿ ಸವಾಲುಃ</u>- 1 ನೇ ಎದುರುದಾರ ಪರ ಶ್ರೀ ಎಂ ಬಿ ಎನ ವಕೀಲರಿಂದ

1 ನೇ ಎದುರುದಾರ ಪರ ಶ್ರೀ ಎಂ ಬಿ ಎನ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು. ಆದ್ದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)